ಕೆಲಸ ಮುಗಿಸಬೇಕು. ಮಾರ್ಚಿ ಅಂತ್ಯದಲ್ಲಿ ಅಥವಾ ಏಪ್ರಿಲ್ ಮೊದಲನೆ ವಾರದಲ್ಲಿ ಈ ಕೆಲಸವನ್ನು ಮುಗಿಸಿ, ಈ ಬಗ್ಗೆ ಆಗತಕ್ಕಂತಹ ಅನಾಹುತಕ್ಕೆ ಈ ಸರ್ಕಾರ ಯಾವಾಗಲೂ ಕೂಡ ಬದ್ದವಾಗಿರುತ್ತದೆ, ಸನ್ಮಾನ್ಯ ಹಾಲಪ್ಪನವರು ಕೇಳಿರುವಂತಹ ಪ್ರಶ್ನೆ ಸತ್ಯವಾಗಿದೆ. ಅದಕ್ಕೆ 100ಕ್ಕೆ 100ರಷ್ಟು ಅದನ್ನು ಕಂಟ್ರೋ ಮಾಡುವ ಬಗ್ಗೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್. ಹಾಲಪ್ಪ: ತಾವು ಏನು ಮಾಡಿದ್ದೀರಿ, ಅದನ್ನು ಇತ್ತೀಚೆಗೆ ಆನೆ ದಾಟಿದೆ. ಕಳೆದ 10 ದಿನಗಳಿಂದ ಈಚೆಗೆ ಅಡಿಕೆ ಬೆಳೆಯನ್ನು ಹಾಳು ಮಾಡಿದೆ. ಆನೆ ಹಿಡಿಯುವಂತಹ ಪ್ರಸ್ತಾವನೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದೀರಿ. ಅದರೆ ಹಿಂದಿನ ಮಂತ್ರಿಗಳು ಸೆಪ್ಟಂಬರ್ ತಿಂಗಳಲ್ಲಿ ನನಗೆ ಒಂದು ಪತ್ರವನ್ನು ಬರೆದಿದ್ದಾರೆ. ಕಾಡಾನೆಯನ್ನು ಹಿಡಿದು ಬೇರೆ ಸ್ಥಳಕ್ಕೆ ಬಿಡುವಂತೆ ಆದೇಶಿಸಲು ಸೂಚಿಸಲಾಗಿದೆ ಎಂದು ಹಿಂದಿನ ಸರ್ಕಾರದ ಹಳೆಯ ಮಂತ್ರಿಗಳು ನೀಡಿರುವಂತಹ ಆದೇಶ ಏನಾಯಿತು? ಈಗ ಆನೆ ಹಿಡಿಯುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಇದೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು. ಹಿಂದಿನ ಮಂತ್ರಿಗಳು ನನಗೆ ಪತ್ರವನ್ನು ಬರೆದಿದ್ದಾರೆ. ಅವರು ಆದೇಶ ಮಾಡಿದ್ದಾರೆ, ಏನಾಯಿತು ನಿಮ್ಮ ಆದೇಶ?

ಶ್ರೀ ಸಿ. ಚೆನ್ನಿಗಪ್ಪ: ಹಿಂದಿನ ಮಂತ್ರಿಗಳೂ ಕೂಡ ಚರ್ಚೆ ಮಾಡಿ ಸಭೆ ಮಾಡಿದ್ದಾರೆ. ಸಭೆಯಲ್ಲಿ ಏನಾಯಿತೆಂದರೆ, ಈಗ ಟ್ರಂಚ್ ಮಾಡಿಬಿಡಿ, ಟ್ರಂಚ್‌ನ್ನು ಮಾಡಿದ ಮೇಲೆ ಅದು ಕಂಟ್ರೋಲ್ ಆಗುತ್ತದೆ ಎಂದು ಹೇಳಿದ್ದರು. ಆ ಪ್ರಕಾರ ಅದನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದರು. ಇವತ್ತು ಬೇರೆ ಪಳಗಿನ ಆನೆಗಳನ್ನು ಬಿಟ್ಟು ಜೊತೆಯಲ್ಲಿ ಕರೆದುಕೊಂಡು ಹೋಗಿ ದೂರದ ಕಾಡಿಗೆ ಬಿಡತಕ್ಕಂತಹ ಕೆಲಸವನ್ನು ಮಾಡಿದ್ದೇವೆ. 1–2 ತಿಂಗಳೊಳಗಾಗಿ ಏನಾದರೂ ಮಾಡಿ ಪಳಗಿದ ಆನೆಯನ್ನು ಕಳುಹಿಸಿ ಅವುಗಳನ್ನು ಪಳಗಿಸಿಕೊಂಡು ದೂರಕ್ಕೆ ಕಳುಹಿಸುವಂತಹ ಕೆಲಸವನ್ನು ನಮ್ಮ ಎಲ್ಲಾ ಅಧಿಕಾರಿಗಳು ಮಾಡಿದ್ದಾರೆ. ಆ ಕೆಲಸವನ್ನು ಮಾಡಿಸುತ್ತೇವೆ.

ಕುಂದಾಪುರ ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಕೊರತೆ.

71(217) ಶ್ರೀ ಗೋಪಾಲ ಪೂಜಾರಿ .ಕೆ(ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಕೊರೆತೆ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ದರ್ಜೆವಾರು ಮಂಜೂರಾದ ಹುದ್ದೆಗಳಾವುವು;

ಇ) ಯಾವ ಯಾವ ದರ್ಜೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇದೆ?

ಈ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):
ಅ) –ಇಲ್ಲ–

ಆ) ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು
ತಹಸೀಲ್ದಾರರು	01	–
ವಿಶೇಷ ತಹಸೀಲ್ದಾರರು	01	01
ಉಪ ತಹಸೀಲ್ದಾರರು/ಶಿರಸ್ತೇದಾರರು	07	–
ಪ್ರದಸ/ರಾಜಸ್ವ ನಿರೀಕ್ಷಕರು	12	02
ದ್ವಿತೀಯ ದರ್ಜೆ ಸಹಾಯಕರು	16	04
ಬೆರಳಚ್ಚುಗಾರರು	03	02
ಅಟೆಂಡರ್	01	01
ದಪೇದಾರ್	01	01
ಗ್ರೂಪ್ ಡಿ ನೌಕರರು	10	–
ತಪಾಸಕರು	01	01
ಸರ್ವೆಯರ್ಸ್	15	–
ಗ್ರಾಮಲೆಕ್ಕಿಗರು	75	21
ವಾಹನ ಚಾಲಕ	01	01
ಒಟ್ಟು	144	34

ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಗೋಪಾಲ ಪೂಜಾರಿ: ಸನ್ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. 34 ಹುದ್ದೆಗಳು ನಮ್ಮ ತಾಲ್ಲೂಕಿನಲ್ಲಿ ಖಾಲಿ ಇವೆ. ವಿಶೇಷ ತಹಸೀಲ್ದಾರ್ ಹುದ್ದೆಗಳೂ ಸಹ ಅಲ್ಲಿ ಖಾಲಿ ಇವೆ. ಕುಂದಾಪುರ ತಾಲ್ಲೂಕಿನಲ್ಲಿ ಬಹಳಷ್ಟು ದಿವಸಗಳಿಂದ ಅಲ್ಲಿನ ಜನ ಯಾವುದೇ ಒಂದು ಕೆಲಸಕ್ಕೆ ಅಲೆದಾಡುವಂತಹ ಪರಿಸ್ಥಿತಿ ಉದ್ಭವಾಗಿದೆ. ಈ ಬಗ್ಗೆ ನಾನು ಅನೇಕ ಬಾರಿ ಇಲಾಖೆಯಲ್ಲಿ ಒತ್ತಡವನ್ನು ಮಾಡಿದ್ದೇನೆ, ಆದರೂ ಸಹ ಅಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ, "ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಾಗಾಗಿ ಅಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಎಷ್ಟು ಸಮಯದೊಳಗೆ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಗೋಪಾಲ ಪೂಜಾರಿಯವರು ಕುಂದಾಪುರ ತಾಲ್ಲೂಕು ಕಚೇರಿಯಲ್ಲಿ ಸಿಬ್ಬಂದಿ ಕೊರತೆ ಇರುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಒಟ್ಟು 144 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 34 ಹುದ್ದೆಗಳು ಖಾಲಿ ಇವೆ, ಅಂದರೆ 110 ಜನ ಕೆಲಸ ಮಾಡುತ್ತಿದ್ದಾರೆ. ಶೇಕಡ 76 ರಷ್ಟು ಅಲ್ಲಿ ಒಂದು ಸಿಬ್ಬಂದಿ ವರ್ಗ ಇದೆ, ಹೀಗಾಗಿ 34 ಹುದ್ದೆಗಳು ಏನು ಖಾಲಿ ಇದೆ,

ಅವುಗಳಲ್ಲಿ ಅನುಕಂಪದ ಆಧಾರದ ಮೇಲೆ ಕೆಲವೊಂದು ನೇಮಕಾತಿಗಳು ಆಗುತ್ತಿವೆ. ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಬೇಗನೆ ತುಂಬಲು ಸರ್ಕಾರ ನೇಮಕಾತಿ ಪ್ರಕ್ರಿಯೆಯನ್ನು ಮಾಡುತ್ತದೆಂದು ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಗೋಪಾಲ ಪೂಜಾರಿ: 20 ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿ ಇದ್ದರೆ, ಯಾವ ಕೆಲಸಗಳನ್ನು ಆ ತಾಲ್ಲೂಕಿನಲ್ಲಿ ಮಾಡಲಿಕ್ಕೆ ಆಗುತ್ತದೆ? 75%ನ ಪ್ರಶ್ನೆ ಬರುವುದಿಲ್ಲ, ಇಡೀ ತಾಲ್ಲೂಕಿನಲ್ಲಿ 21 ಗ್ರಾಮ ಲೆಕ್ಕಿಗರ ಹುದ್ದೆ ಖಾಲಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅನುಕಂಪದ ಆಧಾರದ ಮೇಲೆ ಗ್ರಾಮ ಲೆಕ್ಕಿಗರನ್ನು ನೇಮಕ ಮಾಡುವುದನ್ನು ಬಿಟ್ಟರೆ ಬೇರೆ ಯಾರನ್ನಾದರೂ ಆ ಹುದ್ದೆಗೆ ನೇಮಕ ಮಾಡಿರುವಿರಾ? ನಮ್ಮ ಕ್ಷೇತ್ರದಲ್ಲಿ ಒಬ್ಬ ಗ್ರಾಮ ಲೆಕ್ಕಿಗ ಬರಬೇಕೆಂದರೆ ಅವರ ಅಪ್ಪ ಸಾಯಬೇಕು. ಸರ್ಕಾರದಲ್ಲಿ ಈವರೆಗೆ ರೆಕ್ರೂಟ್‌ಮೆಂಟ್ ಆಗಿಲ್ಲ, ಅದಕ್ಕೆ ಅವರು ಉತ್ತರವನ್ನು ಹೇಳಿಲ್ಲ, ಈಗ ಆಕಸ್ಮಾತ್ ಗ್ರಾಮ ಲೆಕ್ಕಿಗರು ಕೆಲಸಕ್ಕೆ ಸೇರಿದರೂ ಅನುಕಂಪದ ಆಧಾರದ ಮೇಲೆ ನೇಮಕವಾಗುತ್ತಾರೆ. ಎಲ್ಲಾ ತಾಲ್ಲೂಕಿನಲ್ಲಿ 15, 20 ಹುದ್ದೆಗಳು ಖಾಲಿ ಇವೆ. ಇರುವವರನ್ನು ಸಸ್ಪೆಂಡ್ ಮಾಡಿದರೆ ಸರ್ಕಲ್ ಖಾಲಿಯಾಗಿಬಿಡುತ್ತದೆಂದು ಸಸ್ಪೆಂಡ್ ಮಾಡಲಿಕ್ಕೂ ಸಹ ಆಗುತ್ತಿಲ್ಲ. ರೆವಿನ್ಯೂ ಮಿನಿಸ್ಟರ್ ಇದಕ್ಕೇನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಸದಸ್ಯರಾದಂಥ ಜೆ.ಸಿ. ಮಾಧುಸ್ವಾಮಿ, ಗೋಪಾಲ ಪೂಜಾರಿಯವರು ಖಾಲಿಯಿರುವ ಹುದ್ದೆಗಳ ಬಗ್ಗೆ ಏನು ಗಮನಹರಿಸಿದ್ದಾರೆ, ಇದರಲ್ಲಿ ನಿಜ ಸ್ಥಿತಿಯಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಈ ಒಂದು ಅನುಕಂಪದ ಆಧಾರದ ಮೇಲೆಯೇ ಈ ಗ್ರಾಮ ಲೆಕ್ಕಿಗರ ನೇಮಕಾತಿಯಾಗುತ್ತಿದೆ. ಉಳಿದ ನೇಮಕಾತಿಗೆ ಬ್ಯಾನ್ ಇದೆ, ಹಾಗಾಗಿ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಿ ಏನು ಪರಿಹಾರ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ನಿರ್ಧಾರ ಮಾಡುತ್ತೇವೆ, ಈ ಕುಂದಾಪುರ ತಾಲ್ಲೂಕಿನಲ್ಲಿ 21 ಗ್ರಾಮಲೆಕ್ಕಿಗರು, 6 ಗುಮಾಸ್ತರ ಹುದ್ದೆಗಳು ಮತ್ತು 4 ಸಿಪಾಯಿ ಹುದ್ದೆಗಳು ಖಾಲಿ ಇವೆ, ಈಗಾಗಲೇ ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಿಕ್ಕೆ ಸಾಕಷ್ಟು ಅರ್ಜಿಗಳು ನಮ್ಮ ಮುಂದಿವೆ, ಆದಷ್ಟು ಬೇಗನೆ ಅನುಕಂಪದ ಆಧಾರದ ಮೇಲೆ ಈ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡು ಅಲ್ಲೇನು ಕೊರತೆಯಿದೆ, ಅದನ್ನು ನೀಗಿಸುವಂತಹ ಪ್ರಯತ್ನವನ್ನು ನಾನು ಮಾಡುತ್ತೇವೆ.

ಮೈಸೂರು ಜಿಲ್ಲೆಯಲ್ಲಿ ಮಳೆ ಪರಿಹಾರವನ್ನು ವಿತರಿಸುವುದು.

72(175) ಶ್ರೀ ಜಿ.ಟಿ. ದೇವೇಗೌಡ (ಹುಣಸೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಬಿದ್ದ ಮಳೆಯ ಪ್ರಮಾಣವೆಷ್ಟು

ಆ) ಈ ಮಳೆಯಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಪ್ರಮಾಣದ ಸಾರ್ವಜನಿಕ ಆಸ್ತಿ ಪಾಸ್ತಿಗಳು ನಷ್ಟವಾಗಿರುತ್ತವೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಇ) ಮೈಸೂರು ಜಿಲ್ಲೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಮಳೆ ಪರಿಹಾರದ ಹಣವೆಷ್ಟು